ಯುದ್ಧ, ಕಗ್ಗೊಲೆ ಇವೆಲ್ಲವೂ ನಡೆಯುವುದುಂಟು. ಅವುಗಳ ನಡುವೆಯೂ ಧರ್ಮದ ಅರಿವನ್ನು ಉಂಟುಮಾಡುವ, ವ್ಯಕ್ತಿ ತನ್ನ ಘನತೆಯನ್ನು ಕಾಯ್ದಿರಿಸಿಕೊಳ್ಳಬೇಕೆಂಬ ಒತ್ತಾಸೆಗೆ ಒಳಗಾಗುವ ಪ್ರಸಂಗಗಳು ನಡೆಯುವುದುಂಟು. ಆ ಹಿನ್ನೆಲೆಯಲ್ಲಿ ರಾಮಚಂದ್ರ ಚರಿತ ಪುರಾಣದ 'ಸೀತಾಹರಣ ವರ್ಣನಂ' ಭಾಗ ಅಪೂರ್ವವೆನಿಸುತ್ತದೆ. ಕವಿಯ ಕಾವ್ಯ ಸತ್ವ, ಮತ್ತು ಸನ್ನಿವೇಶಗಳ ಮಹತ್ವವನ್ನು ತಿಳಿಯಬೇಕೆಂದರೆ ಕೆಲವು ರಸ ಸ್ಥಾನವನ್ನು ಸೂಕ್ಷ್ಮವಾಗಿ ಗ್ರಹಿಸಿ, ಆಸ್ವಾದಿಸುವ ಅಗತ್ಯವಿದೆ.

ಅಯೋಧ್ಯೆಯಿಂದ ರಾಮ ಲಕ್ಷ್ಮಣ ಸೀತೆಯರು ವನವಾಸಕ್ಕೆ ಬಂದು ಕ್ರೌಂಚ ನದಿಯ ತೀರದ ದಂಡಕಾರಣ್ಯದಲ್ಲಿ ವಿಶ್ರಮಿಸುತ್ತಿದ್ದಾರೆ. ಸಮೀಪದಲ್ಲಿರುವ ಪಾತಾಳಲಂಕೆ ಎಂಬ ಪಟ್ಟಣವನ್ನು ಖರನೆಂಬುವನು ಆಳುತ್ತಿದ್ದನು. ಅವನ ಮಡದಿ ರಾವಣನ ತಂಗಿ ಚಂದ್ರನಖಿ; ಅವರ ಮಗ ಶಂಭುಕ. ಸೂರ್ಯಹಾಸ ಎಂಬ ಖಡ್ಗವನ್ನು ಪಡೆಯಲು ತಪೋನಿರತನಾಗಿರುವ ಅವನ ಸುತ್ತ ದಟ್ಟವಾದ ಬಿದಿರು ಮೆಳೆ ಬೆಳೆದಿದೆ. ಯಕ್ಷ ದೇವತೆಗಳು ಅವನು ಸಾಧಿಸಬೇಕಿದ್ದ ಖಡ್ಗವನ್ನು ತಂದು ಬಿದಿರು ಮೆಳೆಯ ಬಳಿ ಇಟ್ಟು ಹೋಗಿದ್ದಾರೆ. ವನಸಿರಿಯನ್ನು ನೋಡಲೆಂದು ಬಂದ ಲಕ್ಷ್ಮಣನಿಗೆ, ಮಳೆಯೊಂದಿಗೆ ಬೀಸಿ ಬಂದ ಸುಗಂಧವು ತಾಕುತ್ತದೆ. ಆತ ಪರಿಮಳವನ್ನು ಹಿಂಬಾಲಿಸಿ ಬಿದಿರ ಮೆಳೆಯ ಬಳಿಗೆ ಬರುತ್ತಾನೆ. ಅಲ್ಲಿದ್ದ ಖಡ್ಗಕ್ಕೆ ಕೈ ಚಾಚಿ, ಅದರ ಹರಿತವನ್ನು ಪರೀಕ್ಷಿಸಲು ಅದನ್ನು ಪೊದೆಯ ಕಡೆ ಬೀಸುತ್ತಾನೆ; ಬಿದಿರು ಮೆಳೆಯೊಂದಿಗೆ ಶಂಭುಕನ ತಲೆಯೂ ತುಂಡಾಗಿ ಹೋಗುತ್ತದೆ. ಆ ಶಬ್ದಚಿತ್ರವಿದು:

ತಲೆಪಱಿದು ಪಾಱಿ ಪಾಱುವ
ತಲೆವರವೆಡೆವಱಿಯದಟ್ಟೆಯಿಂದುಣ್ಮುವಸೃ
ಗ್ಜಲಧಾರೆ ನಾಳಮೆನೆ ಪಂ
ದಲೆ ಪೋಲ್ತುದು ನಭದೊಳಲರ್ದ ಕೆಂದಾವರೆಯಂ

ಶಂಭುಕನ ತಲೆ ತುಂಡಾಗಿ ಮೇಲೆ ಹಾರಿದೆ; ಹಾರುತ್ತಿರುವ ತಲೆಯವರೆಗೂ ದೇಹದಿಂದ ರಕ್ತ ಚಿಮ್ಮುತ್ತಿದೆ; ಆ ರಕ್ತಧಾರೆ ಕಮಲದ ನಾಳದಂತೆ ಕಾಣುತ್ತಿದೆ. ಹೀಗಾಗಿ, ಆ ಹಸಿತಲೆ ಆಕಾಶದಲ್ಲಿ ಅರಳಿರುವ ಕೆಂಪು ಕಮಲದಂತೆ ಕಂಡಿತು. ಇದು ಉತ್ಪ್ರೇಕ್ಷೆ ಎನಿಸಿದರೂ, ಭೀಕರತೆಯನ್ನ ಸೌಮ್ಯ ನುಡಿಗಳಲ್ಲಿ ತಿಳಿಗೊಳಿಸಿದ ವರ್ಣನೆ. ಶೂದ್ರನಿಗೆ ತಪ್ಪಸ್ಸು ಮಾಡುವ ಹಕ್ಕು ಇಲ್ಲವೆಂಬ ಕಾರಣಕ್ಕೆ ರಾಮಾಯಣದಲ್ಲಿ ಶಂಭುಕನನ್ನು ರಾಮ ಕೊಲ್ಲುತ್ತಾನೆ. ಆದರೆ, ಇಲ್ಲಿ ನಿರಾಪರಾಧಿಯಾದವನನ್ನು ವಧಿಸಿದ್ದಕ್ಕೆ ಲಕ್ಷ್ಮಣ ವ್ಯಥಿತನಾಗುತ್ತಾನೆ.

ರಾಮಾಯಣದ ಕೇಂದ್ರವೇ ಅರಣ್ಯಕಾಂಡದಲ್ಲಿ ಬರುವ ಸೀತಾಪಹರಣ ಸಂದರ್ಭ; ಅದು ಇಡೀ ಕಾವ್ಯದ ಕ್ರಿಯಾಘಟಕ. ಸೀತೆ ಮಾಯಾ ಜಿಂಕೆಯನ್ನು ಕಂಡು ಅದನ್ನು ಅತೀವವಾಗಿ ಬಯಸಿದಲ್ಲಿಂದ ಹಿಡಿದು, ಆಕೆಯನ್ನು ರಾವಣ ಅಪಹರಿಸಿ ಲಂಕೆಗೆ ಹೊತ್ತೊಯ್ಯುವವರೆಗೂ ನಡೆಯುವ ಘಟನೆಗಳು ಅಪೂರ್ವವಾದವುಗಳು. ಕಾಂಚನ ಮೃಗವನ್ನು ಅಪೇಕ್ಷಿಸಿದ ಸೀತೆ ರಾವಣನಿಂದ ಅಪಹೃತಳಾಗಿ, ಸಂಕಷ್ಟಗಳನ್ನು ಅನುಭವಿಸುತ್ತಾಳೆ. ಹಾಗೆಯೇ, ಸೀತೆಯ ಆಮಿಷಕ್ಕೊಳಗಾದ ರಾವಣ ಮರಣ ಹೊಂದಬೇಕಾಗುತ್ತದೆ. ಆದರೆ, 'ರಾಮಚಂದ್ರ ಚರಿತಪುರಾಣ'ದಲ್ಲಿ ಜಿಂಕೆಯ ಪ್ರಸಕ್ತಿಯಿಲ್ಲ. 'ಮೃಗಲೋಚನಂಗಳಿರ್ದುವು ಮೃಗಮೆಲ್ಲಿರ್ದಪುದು' ಎಂಬ ರಾವಣನ ಕುತೂಹಲದ ನುಡಿಯಲ್ಲಿಯೇ 'ಬೆಂಬತ್ತುವ', 'ಬೇಟೆಯಾಡುವ' ಹಸಿವಿಗೆ ಬದಲಾಗಿ, ತಾನೇ ವಶವಾಗುವ ಅಥವಾ ಬಲಿಯಾಗುವ ಅಜಾಗ್ರತೆ ಕಾಣಬರುತ್ತದೆ.

